"ಮಧುರ ಮಕ್ಕಳೇ- ಈಗ ನೀವು ತಂದೆ, ಶಿಕ್ಷಕ, ಸದ್ಗುರು ಮೂವರ ಸನ್ಮುಖದಲ್ಲಿ ಕುಳಿತಿದ್ದೀರಿ, ತಂದೆಯದು ಇದೇ ಕೃಪೆಯಾಗಿದೆ- ಅವರು ಶಿಕ್ಷಕರಾಗಿ ನಿಮಗೆ ಓದಿಸುತ್ತಿದ್ದಾರೆ, ಸದ್ಗುರುವಾಗಿ ಜೊತೆಯಲ್ಲಿ ಕರೆದುಕೊಂಡು ಹೋಗುತ್ತಾರೆ"

ಪ್ರಶ್ನೆ: ನೀವು ಮಕ್ಕಳದು ತಂದೆಯೊಂದಿಗೆ ಯಾವ ಪ್ರತಿಜ್ಞೆಯಿದೆ? ನಿಮ್ಮ ಕರ್ತವ್ಯವೇನು?

ಉತ್ತರ: ತಂದೆಯೊಂದಿಗೆ ಪ್ರತಿಜ್ಞೆಯಿದೆ- ಬಾಬಾ, ನಾವು ತಮ್ಮಿಂದ ಏನೆಲ್ಲವನ್ನೂ ಕೇಳುತ್ತೇವೆ ಅದನ್ನು ಅನ್ಯರಿಗೂ ಅವಶ್ಯವಾಗಿ ತಿಳಿಸುತ್ತೇವೆ ಮತ್ತು ನಮ್ಮ ಸಮಾನ ಮಾಡಿಕೊಳ್ಳುತ್ತೇವೆ. ನಮ್ಮ ಕರ್ತವ್ಯವಾಗಿದೆ- ತಂದೆಯ ಸಮಾನ ಎಲ್ಲರಿಗೂ ಓದಿಸುವುದು ಏಕೆಂದರೆ ಈಗ ಬುದ್ಧಿಯ ಬೀಗವು ತೆರೆದಿದೆ. ಹೇಗೆ ನಾವು ಆಸ್ತಿಯನ್ನು ಪಡೆದುಕೊಳ್ಳುತ್ತಿದ್ದೇವೆಯೋ ಹಾಗೆಯೇ ದಯಾಹೃದಯಿಗಳಾಗಿ ಅನ್ಯರಿಗೆ ಆಸ್ತಿಯನ್ನು ಕೊಡಿಸಬೇಕಾಗಿದೆ.

ಗೀತೆ: ತಂದೆ-ತಾಯಿಯ ಆಶೀರ್ವಾದಗಳನ್ನು ತೆಗೆದುಕೊಳ್ಳಿ............

ಓಂ ಶಾಂತಿ. ಈಗ ಮಕ್ಕಳು ತಂದೆ-ತಾಯಿಯ ಸನ್ಮುಖದಲ್ಲಿ ಕುಳಿತಿದ್ದೀರಿ ಅಥವಾ ಮಕ್ಕಳು ಶಾಲೆಯಲ್ಲಿ ಶಿಕ್ಷಕರ ಬಳಿ ಕುಳಿತಿದ್ದೀರಿ. ಮಕ್ಕಳಿಗೆ ಗೊತ್ತಿದೆ- ನಾವು ಸದ್ಗುರುವಿನ ಬಳಿ ಜ್ಞಾನವನ್ನು ಕೇಳುವುದಕ್ಕಾಗಿ ಕುಳಿತಿದ್ದೇವೆ. ಯಾರಿಂದ ಕೇಳಲು? ಜ್ಞಾನಸಾಗರನಂತೂ ತಂದೆಯೇ ಆಗಿದ್ದಾರೆ. ನಿಮಗೆ ಗೊತ್ತಿದೆ- ಅವರು ಪರಮಧಾಮದಿಂದ ನಮಗೆ ಶಿಕ್ಷಣವನ್ನು ಕೊಡಲು ಬಂದಿದ್ದಾರೆ. ನಿಮ್ಮ ಬುದ್ಧಿಯು ಪರಮಧಾಮ, ಮಧುರ ಮನೆಯ ಕಡೆ ಜೋಡಿಸಲ್ಪಟ್ಟಿದೆ. ಭಲೆ ಓದುವುದಂತೂ ಇಲ್ಲಿಯೇ, ಮಾತಾಪಿತರವರ ಸಮ್ಮುಖದಲ್ಲಿ ಕುಳಿತಿದ್ದರೂ ಸಹ ಬುದ್ಧಿಯೋಗವು ಅಥವಾ ನೆನಪು ನಿರ್ವಾಣಧಾಮದ ಕಡೆಗೆ ಇದೆ. ನಾವು ತಂದೆಯ ಜೊತೆ ಮನೆಗೆ ಹೋಗಬೇಕಾಗಿದೆ ನಂತರ ವಿಷ್ಣುವಿನ ಮನೆಯಲ್ಲಿ ಬರುತ್ತೇವೆ. ಅದೂ ಮನೆಯಾಗಿದೆ, ಇದೂ ಮನೆಯಾಗಿದೆ. ಕೃಷ್ಣಪುರಿ ಅತ್ತೆಯ ಮನೆಗೆ ಹೋಗಬೇಕಾಗಿದೆ. ಮೊದಲಂತೂ ಯಾವ ತಂದೆಯು ಯೋಗ್ಯರನ್ನಾಗಿ ಮಾಡುತ್ತಾರೆಯೋ ಅವರನ್ನು ನೆನಪು ಮಾಡಬೇಕು. ಹೇಗೆ ತಂದೆ-ತಾಯಿಯು ಕನ್ಯೆಯನ್ನು ಯೋಗ್ಯಳನ್ನಾಗಿ ಮಾಡುತ್ತಾರಲ್ಲವೇ. ಯಾವಾಗ ಅತ್ತೆಯ ಮನೆಗೆ ಹೋಗುವಳೋ ಆಗ ತಂದೆ-ತಾಯಿಯನ್ನು ಪ್ರತ್ಯಕ್ಷ ಮಾಡುತ್ತಾರೆ. ಈ ಮಗುವಂತೂ ತುಂಬಾ ಒಳ್ಳೆಯ ಸುಲಕ್ಷಣೆಯಾಗಿದ್ದಾಳೆ ಎಂದು. ಈಗ ನೀವು ತಿಳಿದುಕೊಂಡಿದ್ದೀರಿ- ನಾವು ಪರಮಪಿತ ಪರಮಾತ್ಮನ ಸಮ್ಮುಖದಲ್ಲಿ ಕುಳಿತಿದ್ದೇವೆ, ಓದುತ್ತಿದ್ದೇವೆ. ತಂದೆಯು ಮಕ್ಕಳಿಗಾಗಿ ಬಹಳ ಪರಿಶ್ರಮಪಡುತ್ತಾರೆ ಇದು ಅವರ ಕೃಪೆಯಾಗಿದೆ. ಮಕ್ಕಳು ಬ್ಯಾರಿಸ್ಟರ್ ಆಗುತ್ತಾರೆಂದರೆ ಅವರ ತಂದೆ-ತಾಯಿಯು ಚೆನ್ನಾಗಿ ಪಾಲನೆ ಕೊಟ್ಟಿದ್ದಾರೆ, ಓದಿಸಿದ್ದಾರೆಂದು ಹೇಳುತ್ತಾರೆ. ತಂದೆ-ತಾಯಿಯು ರಚಯಿತನೂ ಆಗಿದ್ದಾರೆ, ನಿರ್ದೇಶಕರೂ ಆಗಿರುತ್ತಾರೆ. ಗಂಡುಮಕ್ಕಳ ಮೋಹವು ತಂದೆಯಲ್ಲಿರುತ್ತದೆ. ಹೆಣ್ಣುಮಕ್ಕಳ ಮೋಹವು ತಾಯಿಯ ಮೇಲಿರುತ್ತದೆ ಏಕೆಂದರೆ ಮಕ್ಕಳಿಗೆ ತಂದೆಯಿಂದ ಆಸ್ತಿಯು ಸಿಗುತ್ತದೆ. ಕುಮಾರಿಯರಂತೂ ಹೋಗಿ ತಾಯಿಯಾಗುತ್ತಾರೆ, ಈಗ ಇಲ್ಲಿ ನೀವು ಬ್ರಾಹ್ಮಣ ಕುಲಭೂಷಣರಾಗಿದ್ದೀರಿ. ಬ್ರಾಹ್ಮಣರ ಗಾಯನವೂ ಇದೆ. ಪ್ರಜಾಪಿತ ಬ್ರಹ್ಮನ ಸಂತಾನರಂತೂ ಅನೇಕರಿದ್ದಾರೆ. ಆ ಬ್ರಾಹ್ಮಣರೊಂದಿಗೂ ನೀವು ಕೇಳಬಹುದು. ನೀವು ಮುಖವಂಶಾವಳಿಯಾಗಿದ್ದೀರಿ ಆದ್ದರಿಂದ ಬ್ರಹ್ಮನ ಮುಖ ಸಂತಾನರಾಗಿದ್ದೀರಿ. ಕುಖ ಸಂತಾನರಂತೂ ಲೌಕಿಕ ತಂದೆ-ತಾಯಿಯಿಂದ ಜನ್ಮ ಪಡೆಯುತ್ತಾರೆ. ಬ್ರಹ್ಮನ ಮುಖದಿಂದ ನೀವು ಯಾವಾಗ ಜನ್ಮ ತೆಗೆದುಕೊಂಡಿರಿ? ತಿಳಿಸುವುದಿಲ್ಲ ಆದರೆ ನಿಮಗೆ ಪ್ರತ್ಯಕ್ಷರೂಪದಲ್ಲಿ ಗೊತ್ತಿದೆ- ನಾವು ಬ್ರಹ್ಮ ಮುಖಕಮಲದಿಂದ ದತ್ತು ಮಾಡಲ್ಪಟ್ಟಿದ್ದೇವೆ. ಶಿವತಂದೆಯು ದತ್ತು ತೆಗೆದುಕೊಂಡಿದ್ದಾರೆ. ನಾವು ತಂದೆ, ಶಿಕ್ಷಕ, ಸದ್ಗುರು ಮೂವರ ಸಮ್ಮುಖದಲ್ಲಿ ಕುಳಿತಿದ್ದೇವೆಂದು ನೀವು ತಿಳಿಯುತ್ತೀರಿ. ತಂದೆಯಂತೂ ದೈವೀಗುಣಗಳನ್ನು ಕಲಿಸುತ್ತಾರೆ. ಶ್ರೀಕೃಷ್ಣನಂತಹ ಗುಣವಂತರು, ಸರ್ವಗುಣ ಸಂಪನ್ನರು..... ಇಲ್ಲಿಯೇ ಪುರುಷಾರ್ಥ ಮಾಡಿ ಆ ರೀತಿ ಆಗಬೇಕಾಗಿದೆ. ಮನುಷ್ಯರಂತೂ ರಾಧೆ-ಕೃಷ್ಣರು ಹಿಂದಿನ ಜನ್ಮದಲ್ಲಿ ಯಾರಾಗಿದ್ದರು ಎಂಬುದನ್ನು ತಿಳಿದುಕೊಂಡಿಲ್ಲ. ಇದನ್ನು ಕೇವಲ ನೀವು ಮಕ್ಕಳೇ ತಿಳಿದುಕೊಂಡಿದ್ದೀರಿ. ಯಾರು ಪೂಜ್ಯರಾಗಿದ್ದರೋ ಅವರೇ ಪೂಜಾರಿಗಳಾದರು ನಂತರ ಪೂಜ್ಯರಾಗುತ್ತಾರೆ. ಭಕ್ತರಿಗೆ ಪೂಜಾರಿ ಎಂದು ಕರೆಯಲಾಗುತ್ತದೆ. ನರನಿಂದ ನಾರಾಯಣ ಅಥವಾ ಭಿಕಾರಿಯಿಂದ ರಾಜಕುಮಾರನಾಗುವ ಆಸ್ತಿಯನ್ನು ತಂದೆಯ ವಿನಃ ಮತ್ತ್ಯಾರೂ ಕೊಡಲು ಸಾಧ್ಯವಿಲ್ಲ. ನೀವು ಏನು ಮಾಡುತ್ತಿದ್ದೀರಿ? ಒಂದುವೇಳೆ ಈ ರೀತಿ ನಿಮ್ಮನ್ನು ಯಾರಾದರೂ ಕೇಳಿದರೆ ನೀವು ತಿಳಿಸಿ- ನಾವು ಪರಮಾತ್ಮನ ಮುಖಾಂತರ ಓದುತ್ತಿದ್ದೇವೆ. ಗುರಿ-ಉದ್ದೇಶವಂತೂ ಪ್ರತಿಯೊಬ್ಬರ ಬುದ್ಧಿಯಲ್ಲಿ ಇದೆಯಲ್ಲವೇ. ನಾವು ತಂದೆಯಿಂದ ಬೇಹದ್ದಿನ ಆಸ್ತಿಯನ್ನು ಪಡೆಯುತ್ತಿದ್ದೇವೆ. ಸ್ವರ್ಗದ ಆಸ್ತಿಯು ಲಕ್ಷ್ಮಿ-ನಾರಾಯಣ ಅಥವಾ ರಾಜಕುಮಾರ-ಕುಮಾರಿಯರಾಗುವುದು. ಇಲ್ಲಿ ಈ ಕಾಲೇಜ್ನಲ್ಲಿ ನೀವು ರಾಜಕುಮಾರ-ಕುಮಾರಿಯರಾಗುತ್ತೀರಿ. ನಿಮಗೆ ಗೊತ್ತಿದೆ- ಭವಿಷ್ಯದಲ್ಲಿ ಹೊಸವಿಶ್ವದ ರಾಜಕುಮಾರ-ರಾಜಕುಮಾರಿಯರಾಗಲು ನಾವು ಓದುತ್ತಿದ್ದೇವೆ. ಹೊಸಪ್ರಪಂಚಕ್ಕೆ ಸತ್ಯಯುಗವೆಂದು ಹೇಳಲಾಗುತ್ತದೆ. ಸತ್ಯಯುಗದಲ್ಲಿ ಅಥವಾ ಕಲಿಯುಗದಲ್ಲಿರುವವರು ಮನುಷ್ಯರೇ ಅಲ್ಲವೆ. ಜ್ಞಾನವೂ ಸಹ ಮನುಷ್ಯರಿಗೇ ಸಿಗುತ್ತದೆ. ಪ್ರಾಣಿಗಳಿಗಂತೂ ಕೊಡುವುದಿಲ್ಲ. ಮನುಷ್ಯರು ದೈವೀಗುಣವುಳ್ಳವರಾಗಿದ್ದರು, ಈಗ ಅಸುರಿ ಗುಣವುಳ್ಳವರಾಗಿದ್ದಾರೆ. ಮತ್ತೆ ನಾವು ದೈವೀಗುಣವುಳ್ಳವರಾಗುತ್ತೇವೆ. ಇದು ನೀವು ಮಕ್ಕಳ ಬುದ್ಧಿಯಲ್ಲಿದೆ. ಇದಂತೂ

ಸಹಜವಾಗಿ ತಿಳಿದುಕೊಳ್ಳುವ ಮಾತಾಗಿದೆ. 84 ಜನ್ಮಗಳ ಚಕ್ರವೂ ಸಹ ಭಾರತಕ್ಕೋಸ್ಕರವೇ ಇದೆ. 84 ಜನ್ಮಗಳ ಚಕ್ರದ ರಹಸ್ಯವು ಮತ್ಯಾರ ಬುದ್ಧಿಯಲ್ಲಿಯೂ ಕುಳಿತುಕೊಳ್ಳುವುದಿಲ್ಲ. ಸ್ವದರ್ಶನ ಚಕ್ರವಂತೂ ಕೃಷ್ಣನಿಗಿತ್ತು. ವಿಷ್ಣು, ಲಕ್ಷ್ಮೀ-ನಾರಾಯಣರ ಕಂಬೈಂಡ್ ರೂಪವಾಗಿದೆ. ಬಾಲ್ಯದಲ್ಲಿ ಅವರೇ ರಾಧೆ-ಕೃಷ್ಣರಾಗಿದ್ದರು ಆದರೆ ಅದರಲ್ಲೂ ಸಹ ಕೇವಲ ಕೃಷ್ಣನನ್ನೇ ತೋರಿಸುತ್ತಾರೆ, ರಾಧೆಯನ್ನು ಎಂದೂ ಸಹ ಚಕ್ರದಲ್ಲಿ ತೋರಿಸುವುದಿಲ್ಲ. ಕೇವಲ ನಾರಾಯಣ ಅಥವಾ ವಿಷ್ಣುವನ್ನು ತೋರಿಸುತ್ತಾರೆ ಲಕ್ಷ್ಮಿಯನ್ನಲ್ಲ. ಅದರಲ್ಲಿ ಲಕ್ಷ್ಮಿಯು ಬಂದುಬಿಡುತ್ತಾರೆ. ವಾಸ್ತವದಲ್ಲಿ ಸ್ವದರ್ಶನ ಚಕ್ರಧಾರಿಗಳು ನೀವಾಗಿದ್ದೀರಿ.

ನಾವು ಪರಮಾತ್ಮನಿಂದ ಬಹಳ ವಿಚಿತ್ರವಾದ ವಿದ್ಯೆಯನ್ನು ಓದುತ್ತಿದ್ದೇವೆಂದು ನೀವು ತಿಳಿದುಕೊಂಡಿದ್ದೀರಿ. ಅವರೇ ಜ್ಞಾನಸಾಗರ, ಮನುಷ್ಯ ಸೃಷ್ಟಿಯ ಬೀಜರೂಪ, ಸತ್ಯ, ಚೈತನ್ಯವಾಗಿದ್ದಾರೆ. ಆತ್ಮವನ್ನೇ ಸತ್ಯ ಮತ್ತು ಚೈತನ್ಯವೆಂದು ಹೇಳಲಾಗುತ್ತದೆ. ಶರೀರವನ್ನು ಸತ್ಯ ಮತ್ತು ಚೈತನ್ಯವೆಂದು ಹೇಳಲು ಸಾಧ್ಯವಿಲ್ಲ. ಮಗುವಿನ ಶರೀರವೂ ಸಹ 5 ತಿಂಗಳವರೆಗೆ ಜಡವಾಗಿದ್ದರೂ ಗರ್ಭದಲ್ಲಿ ವೃದ್ಧಿಯನ್ನು ಪಡೆಯುತ್ತಿರುತ್ತದೆ. ವೃದ್ಧಿಯನ್ನಂತೂ ಪ್ರತೀ ವಸ್ತುವು ಪಡೆಯುತ್ತದೆ ಆದರೆ ಈ ಮನುಷ್ಯನ ಆತ್ಮವು ಮಹಾನ್ ಆಗಿದೆ. ಮನುಷ್ಯರಿಗೆ ಮಹಿಮೆಯೂ ಆಗುತ್ತದೆ ಮತ್ತು ನಿಂದನೆಯೂ ಆಗುತ್ತದೆ. ಪತ್ರಿಕೆಗಳಲ್ಲಿ ಹಾಕಿಸಿದ್ದರು- ಇಂಗ್ಲಂಡ್ನ ಪ್ರಧಾನಮಂತ್ರಿ ಚರ್ಚ್‌ನಲ್ಲಿ ಹೋದಾಗ ಜೊತೆಯಲ್ಲಿ ಬೆಕ್ಕನ್ನೂ ಕರೆದುಕೊಂಡು ಹೋದರು. ನೋಡಿ- ಬೆಕ್ಕಿಗೂ ಸಹ ಎಷ್ಟೊಂದು ಮಾನ್ಯತೆಯಿರುತ್ತದೆ. ಅಲ್ಲಿಗೆ ನೀವೂ ಸಹ ಆಜ್ಞೆಯಿಲ್ಲದೆ ಹೋಗಲು ಸಾಧ್ಯವಾಗುವುದಿಲ್ಲ. ಆದರೆ ಬೆಕ್ಕಿಗೆ ಆಜ್ಞೆಯು ಸಿಕ್ಕಿಬಿಡುತ್ತದೆ. ಬಹಳ ಮನುಷ್ಯರು ಹೇಳುತ್ತಾರೆ- ನಾಯಿಯೂ ಸಹ ಭಗವಂತನನ್ನು ನೆನಪು ಮಾಡುತ್ತದೆ. ಅದು ಬೊಗಳುತ್ತದೆಯಲ್ಲವೆ. ಅದೂ ಸಹ ಕೇವಲ ಭಗವಂತನೇ ಎಂದು ಹೇಳುತ್ತಾರೆ, ಏನನ್ನೂ ತಿಳಿದುಕೊಂಡಿಲ್ಲ ಅಂದಾಗ ಮನುಷ್ಯರು ಮತ್ತು ಪ್ರಾಣಿಗಳಲ್ಲಿ ಅಂತರವೇನಿದೆ? ಈಗ ನೀವು ಎಷ್ಟೊಂದು ಶ್ರೇಷ್ಠರಾಗುತ್ತೀರಿ. ಈಗ ನಿಮ್ಮದು ಬಹಳ ಮಹಿಮೆಯಾಗುತ್ತದೆ. ಯಾವಾಗ ಕಾರ್ಯರೂಪದಲ್ಲಿ ನಿಮ್ಮ ಪ್ರಭಾವವು ಬೀರುತ್ತದೆಯೋ ಆಗ ಎಲ್ಲಾ ಹೇಳುತ್ತಾರೆ ಬ್ರಹ್ಮಾಕುಮಾರಿಯರ ಬಳಿ ಹೋಗಬೇಕೆಂದು. ಬ್ರಹ್ಮಾಕುಮಾರ-ಕುಮಾರಿಯರು ಶಿವನ ಮೊಮ್ಮಕ್ಕಳಾಗಿದ್ದೀರಿ. ತಂದೆಯಂತೂ ಒಬ್ಬರೇ ಆಗಿದ್ದಾರಲ್ಲವೆ. ಮಮ್ಮಾ-ಬಾಬಾರವರಿಗೆ ನೀವು ರಚನೆಯಾಗುತ್ತೀರಿ. ನಿಮಗೆ ಗೊತ್ತಿದೆ, ನಾವು ಶಿವತಂದೆಯ ಮೊಮ್ಮಕ್ಕಳಾಗಿದ್ದೇವೆ, ಇದರಲ್ಲಿ ವೃದ್ಧರು ಹಾಗೂ ಯುವಕರು ಮುಂತಾದವರ ಮಾತಿಲ್ಲ. ನಾವು ಶಿವತಂದೆಯ ಮೊಮ್ಮಕ್ಕಳು, ಬ್ರಹ್ಮಾರವರ ಮಕ್ಕಳಾದೆವು. ಎಷ್ಟೊಂದು ಸಹಜ ಮಾತಾಗಿದೆ. ಇದು ಬ್ರಾಹ್ಮಣರ ಕುಲವಾಗಿದೆಯಲ್ಲವೆ. ಅಂದಮೇಲೆ ರಚಯಿತ ತಂದೆಯೇ ಆದರು. ನಿಮಗೆ ಗೊತ್ತಿದೆ- ನಾವು ಶಿವತಂದೆಯ ಮಕ್ಕಳು ಈ ವೃಕ್ಷದ ಮೊದಲ ತಳಪಾಯವಾಗಿದ್ದೇವೆ. ಈ ಬ್ರಹ್ಮಾರವರು ಸಂಗಮದಲ್ಲಿ ವೃಕ್ಷದ ಬುಡದಲ್ಲಿ ಕುಳಿತಿದ್ದಾರೆ. ನಾವು ಶ್ರೇಷ್ಠಾತಿಶ್ರೇಷ್ಠ ಶಿವತಂದೆಯ ಮೊಮ್ಮಕ್ಕಳಾಗಿದ್ದೇವೆ, ಅವರಿಂದ ನಾವು ಸ್ವರ್ಗದ ಆಸ್ತಿಯನ್ನು ಪಡೆಯುತ್ತಿದ್ದೇವೆ ಇದನ್ನೆಂದೂ ಮರೆಯಬಾರದು. ದೇಹಸಹಿತವಾಗಿ ಏನೆಲ್ಲವೂ ಇದೆಯೋ ಅದನ್ನು ಮರೆತು ಅಶರೀರಿಯಾಗಬೇಕಾಗಿದೆ. ಈಗ ನಾವು ತಂದೆಯ ಬಳಿ ಅಥವಾ ಮಧುರ ಮನೆಗೆ ಹೋಗಬೇಕಾಗಿದೆ. ನಾವು ಶಿವತಂದೆಯ ಮೊಮ್ಮಕ್ಕಳಾಗಿದ್ದೇವೆ. ತಂದೆಯಂತೂ ಅವಶ್ಯವಾಗಿ ಬೇಕಲ್ಲವೆ. ನಾವು ಬ್ರಹ್ಮಾಕುಮಾರ-ಕುಮಾರಿಯರಾಗಿದ್ದೇವೆ, ಶಿವನ ಮೊಮ್ಮಕ್ಕಳಾಗಿದ್ದೇವೆ ಅಂದಮೇಲೆ ತಂದೆಯ ಆಸ್ತಿಯೇ ಸಿಗುತ್ತದೆಯಲ್ಲವೆ. ವಿಶ್ವದ ರಾಜ್ಯಭಾಗ್ಯವನ್ನೇ ಸತ್ಯಸ್ವರಾಜ್ಯವೆಂದು ಕರೆಯಲಾಗುತ್ತದೆ. ಇಡೀ ವಿಶ್ವಕ್ಕೆ ನೀವು ಮಾಲೀಕರಾಗುತ್ತೀರಿ. ಯಾವ ಭಯವೂ ಇಲ್ಲ. ಅದನ್ನು ಅದ್ವೈತ ರಾಜ್ಯವೆಂದು ಹೇಳಲಾಗುವುದು. ಅಲ್ಲಿ ಅನ್ಯರು ಯಾರೂ ಇರುವುದಿಲ್ಲ. ಸರ್ವಗುಣ ಸಂಪನ್ನರು, ಅಹಿಂಸಾ ಪರಮೋಧರ್ಮಿಗಳಾಗಿಬಿಡುತ್ತೀರಿ. ತಂದೆಯು ತಿಳಿಸಿದ್ದಾರೆ- ಹಿಂಸೆಯೂ ಸಹ ಎರಡು ಪ್ರಕಾರದ್ದಾಗಿದೆ - ಒಂದು ಸ್ಥೂಲ ಹಿಂಸೆಯಾಗಿದೆ, ಇನ್ನೊಂದು ಕಾಮಕಟಾರಿಯನ್ನು ನಡೆಸುವುದಾಗಿದೆ. ನಾವು ಡಬಲ್ ಅಹಿಂಸಕರಾಗಿದ್ದೇವೆ, ಸತ್ಯಯುಗದಲ್ಲಿ ಹಿಂಸೆಯ ಮಾತಿರುವುದಿಲ್ಲ. ಶಾರೀರಿಕ ಹಿಂಸೆಯಾಗಲಿ, ವಿಕಾರದ ಹಿಂಸೆಯಾಗಲಿ ಇರುವುದಿಲ್ಲ. ಅಹಿಂಸಾ ಪರಮೋಧರ್ಮ ದೇವಿ-ದೇವತಾಧರ್ಮವೆಂದು ಹೇಳುತ್ತಾರೆ. ನಾವು ಅದರ ಶೃಂಗಾರವಾಗುತ್ತೇವೆ. ಬ್ರಾಹ್ಮಣರಿಂದ ದೇವತೆಗಳು ಆಗುತ್ತೇವೆ. ಮನುಷ್ಯರೆನ್ನುವ ಹೆಸರು ಹೊರಟುಹೋಗುತ್ತದೆ. ನಾವು ಮನುಷ್ಯರಿಂದ ದೇವತೆಗಳಾಗುತ್ತೇವೆ. ಹೇಗೆ ಬ್ಯಾರಿಸ್ಟರ್, ಇಂಜಿನಿಯರ್ ಮುಂತಾದವರಾಗುತ್ತಾರೆ. ಹೇಗೆ ಆದರು ಎಂಬುದು ಅವರಿಗೇ ಗೊತ್ತಿರುತ್ತದೆ ಹಾಗೆಯೇ ನಿಮಗೆ ಗೊತ್ತಿದೆ, ನಾವು ಈ ವಿದ್ಯೆಯಿಂದ ದೇವತೆಗಳಾಗುತ್ತೇವೆ. ಬಹಳ ಸಹಜವಾಗಿ ಅನೇಕ ಧರ್ಮಗಳ ಯಾವ ವೃಕ್ಷವಿದೆ ಅದರ ಆದಿ-ಮಧ್ಯ-ಅಂತ್ಯದ ಜ್ಞಾನವು ನಿಮಗಿದೆ, ಬೇರೆ ಯಾರಿಗೂ ಗೊತ್ತಿಲ್ಲ. ನಿಮಗೆ ಗೊತ್ತಿದೆ- ನಮ್ಮ ತಂದೆ, ಶಿಕ್ಷಕ ಪರಮಧಾಮದಿಂದ ನಮಗೆ ಓದಿಸಲು ಬಂದಿದ್ದಾರೆ. ಪರಮಧಾಮವು ಎಷ್ಟು ಉನ್ನತವಾಗಿದೆ. ವಿಮಾನವೂ ಸಹ ಅಲ್ಲಿಗೆ ಹೋಗಲು ಸಾಧ್ಯವಿಲ್ಲ. ತಂದೆಯು ರೆಕ್ಕೆಗಳಿಲ್ಲದೆ ಬಂದು ಹೇಗೆ ಓದಿಸುತ್ತಾರೆ ಅಂದಮೇಲೆ ಅಷ್ಟೊಂದು ಖುಷಿಯಿರಬೇಕು. ನಮ್ಮ ತಂದೆಯು ಶಿಕ್ಷಕನೂ ಆಗಿದ್ದಾರೆ, ಪರಮಧಾಮದಲ್ಲಿರುತ್ತಾರೆ ಅಲ್ಲಿಂದ ಬಂದು ನಮಗೆ ಓದಿಸುತ್ತಾರೆ. ಅವರಂತೂ ಬಹಳ ಸೇವೆ ಮಾಡಬೇಕಾಗಿದೆ. ಭಕ್ತರನ್ನು ಖುಷಿಪಡಿಸುವ ಸೇವೆ ಮಾಡಬೇಕಾಗುತ್ತದೆ. ಆದರೆ ಭಕ್ತರು ನನ್ನನ್ನು ಅರಿತುಕೊಂಡಿಲ್ಲ. ನಾನು ಅವರ ಎಷ್ಟೊಂದು ಸೇವೆ ಮಾಡುತ್ತೇನೆ, ನೌಧಾಭಕ್ತಿ ಮಾಡುವವರಿಗೂ ಮನದುಂಬಿಸುತ್ತೇನೆ. ಇದರ ಸಾಕ್ಷಾತ್ಕಾರವನ್ನು ಮಕ್ಕಳು ನೋಡಿದ್ದೀರಿ, ಕೃಷ್ಣನ ದರ್ಶನವನ್ನು ಕೊಡು ಎಂದು ನೌಧಾಭಕ್ತಿಯಲ್ಲಿ ಕುಳಿತುಬಿಡುತ್ತಾರೆ. ಕಣ್ಣುಗಳಿಂದ ಧಾರಾಕಾರವಾಗಿ ನೀರು ಸುರಿಯುತ್ತಿರುತ್ತದೆ, ಯಾವಾಗ ಇಂತಹ ತೀವ್ರಭಕ್ತಿ ಮಾಡುತ್ತಾರೆ ಆಗ ಸಾಕ್ಷಾತ್ಕಾರ ಮಾಡಿಸುತ್ತೇನೆ. ಅದು ಭಕ್ತಿಮಾರ್ಗವಾಗಿದೆ ಅಂದರೆ ಈ ಸಮಯದಲ್ಲಿ ಅವರನ್ನೂ ಖುಷಿಪಡಿಸುತ್ತೇನೆ. ನಿಮಗಂತೂ ಸಮ್ಮುಖದಲ್ಲಿ ಕುಳಿತು ತಿಳಿಸುತ್ತೇನೆ, ಓದಿಸುತ್ತೇನೆ.

ಭಗವಾನುವಾಚವಂತೂ ಅವಶ್ಯವಾಗಿದೆ. ಇದರಲ್ಲಿ ಯಾವುದೇ ಸಂಶಯವಿಲ್ಲ. ಗೀತೆಯಲ್ಲಿಯೂ ಬರೆಯಲ್ಪಟ್ಟಿದೆ- ಹೇ ಮಕ್ಕಳೇ, ನಿಮ್ಮನ್ನು ನರನಿಂದ ನಾರಾಯಣರನ್ನಾಗಿ ಮಾಡುವ ರಾಜಯೋಗವನ್ನು ಕಲಿಸುತ್ತಿದ್ದೇನೆ ಆದರೆ ಕೃಷ್ಣನ ಹೆಸರನ್ನು ಹಾಕಿಬಿಟ್ಟಿದ್ದಾರೆ. ಕೃಷ್ಣನ ಆತ್ಮವಂತೂ ಈ ಸಮಯದಲ್ಲಿ ಅಂತಿಮಜನ್ಮದಲ್ಲಿದೆ ಅದೂ ಸಹ ಕುಳಿತು ಓದುತ್ತದೆ. ಕೃಷ್ಣಭಗವಾನುವಾಚ ಅಲ್ಲ. ಮಕ್ಕಳಿಗೆ ಗೊತ್ತಿದೆ- ಅವಶ್ಯವಾಗಿ ಸೂರ್ಯವಂಶಿ, ಚಂದ್ರವಂಶಿ ರಾಜಧಾನಿಯು ಸ್ಥಾಪನೆಯಾಗುತ್ತಾ ಇದೆ. ನಾವು ಪುರುಷಾರ್ಥವನ್ನು ಮಾಡಿ ಅವಶ್ಯವಾಗಿ ಆಸ್ತಿಯನ್ನು ಪಡೆಯುತ್ತೇವೆ. ತಂದೆಯು ಎಷ್ಟೊಂದು ದಯಾಹೃದಯಿ ಆಗಿದ್ದಾರೆ! ಬಂದು ಮಕ್ಕಳನ್ನು ಮಡಿಲಿಗೆ ತೆಗೆದುಕೊಳ್ಳುತ್ತಾರೆ. ಮಕ್ಕಳೂ ಹೇಳುತ್ತಾರೆ- ಬಾಬಾ, ತಾವು ಕಲ್ಪದ ಹಿಂದಿನ ತಂದೆಯೇ ಆಗಿದ್ದೀರಿ, ನಾವೂ ಸಹ ಅವರೇ ಆಗಿದ್ದೇವೆ. ಬಂದು ನಿಮ್ಮನ್ನು ಸೇರಿದ್ದೇವೆ. ನೀವು ಅದೇ ತಂದೆ, ನಾವು ಅದೇ ಮಕ್ಕಳಾಗಿದ್ದೇವೆ. ಈಗ ತಾವು ರಾಜ್ಯಭಾಗ್ಯವನ್ನು ಕೊಡಲು ಬಂದಿದ್ದೀರಿ. ತಂದೆಯು ಪುನಃ ನಮಗೆ ಓದಿಸುತಿದ್ದಾರೆ. ನಾವು ಶಿವನ ಮೊಮ್ಮಕ್ಕಳಾಗಿದ್ದೇವೆ. ಪ್ರಜಾಪಿತ ಬ್ರಹ್ಮಾರವರ ಹೆಸರು ಪ್ರಸಿದ್ಧವಾಗಿದೆ. ನಿಮಗೆ ಗೊತ್ತಿದೆ- ಸ್ವರ್ಗದ ರಚಯಿತ ಪರಮಪಿತ ಪರಮಾತ್ಮನೇ ಆಗಿದ್ದಾರೆ, ಆಸ್ತಿಯು ಅವರಿಂದ ಸಿಗುತ್ತದೆ. ಬ್ರಹ್ಮಾರವರಿಗೂ ಸಹ ಅವರಿಂದ ಸಿಕ್ಕಿತ್ತು. ಈ ತಂದೆಯುನೀವು ಬ್ರಾಹ್ಮಣರೊಂದಿಗೆ ಮಾತನಾಡುತ್ತಿದ್ದಾರೆ. ಎಷ್ಟು ಚೆನ್ನಾಗಿ ತಿಳಿಸುತ್ತಾರೆ ಅಂದಾಗ ಇಂತಹ ತಂದೆಯನ್ನೇಕೆ ಮರೆಯುತ್ತೀರಿ! ತಂದೆಯ ಮನೆಯಲ್ಲಿ ಕುಳಿತಿದ್ದೀರಿ. ತಂದೆಯೇ ಶಿಕ್ಷಕರಾಗಿ ಓದಿಸುತ್ತಾರೆ, ನಾವು ರಾಜಯೋಗವನ್ನು ಕಲಿಯುತ್ತಿದ್ದೇವೆ. ನಾವು ಶಾಂತಿಧಾಮಕ್ಕೆ ಹೋಗುತ್ತೇವೆ ನಂತರ ಸುಖಧಾಮದಲ್ಲಿ ಬರುತ್ತೇವೆ. ಈ ಕಲಿಯುಗೀ ಪ್ರಪಂಚದ ವಿನಾಶವಾಗಲಿದೆ. ಕಲ್ಪದ ಹಿಂದಿನ ತರಹ ನೀವು ಸಾಕ್ಷಿಯಾಗಿ ನೋಡಬೇಕಾಗುತ್ತದೆ. ಹೇಗೆ ಪರೀಕ್ಷೆಯನ್ನು ಉತ್ತೀರ್ಣ ಮಾಡಿದೆವು, ಹೇಗೆ ವಿನಾಶವಾಯಿತು? ನಂತರ ಎಲ್ಲಿ ಜಯಿಸಿದೆವು ಅಲ್ಲಿ ಜನ್ಮವು ಹೇಗಾಗುತ್ತದೆ? ಹೇಗೆ ಮಹಲ್ ಇತ್ಯಾದಿಗಳು ಹೇಗೆಆಗುತ್ತವೆ? ಎಂಬುದನ್ನು ನೋಡುತ್ತಾ ಹೋಗಿ. ಹೀಗಲ್ಲಾ- ಚಿನ್ನದ ದ್ವಾರಿಕೆಯು ಕೆಳಗಡೆ ಹೋಯಿತು, ಅದು ಪುನಃ ಹೊರಬರುವುದಿಲ್ಲವೆಂದು ನಿಮ್ಮ ಬುದ್ಧಿಯಲ್ಲಿದೆ. ಮನುಷ್ಯರು ರಾವಣನದೂ ಸಹ ಚಿನ್ನದ ಲಂಕೆಯಿತ್ತೆಂದು ಹೇಳುತ್ತಾರೆ ಆದರೆ ಈ ರೀತಿ ಯಾವುದೂ ಇಲ್ಲ. ಚಿನ್ನದ ಮಹಲಂತೂ ದೇವತೆಗಳದ್ದಿರುತ್ತದೆ. ಅದು ಈಗಿಲ್ಲ. ಈಗಂತೂ ಭಾರತದ ದೋಣಿಯೇ ಸಿಕ್ಕಿಹಾಕಿಕೊಂಡಿದೆ. ಈಗ ನೀವು ಮಕ್ಕಳು ನರಕರೂಪಿ ವಿಷಯಸಾಗರದಿಂದ ದೋಣಿಯನ್ನು ಪಾರು ಮಾಡುತ್ತೀರಿ. ಬಾಕಿ ಸ್ಥೂಲದೋಣಿಯ ಯಾವುದೇ ಮಾತಿಲ್ಲ. ನೀವು ಸಾಗರನ ಮಕ್ಕಳು ಸುಟ್ಟು ಭಸ್ಮವಾಗಿದ್ದಿರಿ, ಕಾಮಚಿತೆಯ ಮೇಲೆ ಕುಳಿತು ಕಪ್ಪಾಗಿದ್ದೀರಿ. ನೀವು ಸುಂದರವಾಗಿದ್ದವರು ಮತ್ತೆ ಕಪ್ಪಾಗಿಬಿಟ್ಟಿರಿ. ನೀವು ಭಾರತದ ದೇವಿ-ದೇವತೆಗಳು ಎಷ್ಟು ಸುಂದರರಾಗಿದ್ದಿರಿ! ನೀವೆಲ್ಲರೂ ಶ್ಯಾಮಸುಂದರರಾಗಿದ್ದಿರಿ, ಈಗ ನಾವು ಯಾರ ಮುಂದೆ ಕುಳಿತಿದ್ದೇವೆಂದು ಮಕ್ಕಳಿಗೆ ಗೊತ್ತಿದೆ. ಪರಮಪಿತ ಪರಮಾತ್ಮನೇ ಕುಳಿತು ರಾಜಯೋಗವನ್ನು ಕಲಿಸುವಂತಹ ಮತ್ಯಾವುದೇ ಸತ್ಸಂಗಳಿಲ್ಲ. ನಿರಾಕಾರ ತಂದೆಯು ಯಾವುದೋ ಒಂದು ಶರೀರದಲ್ಲಿ ಬಂದಿದ್ದಾರಲ್ಲವೆ. ಶ್ರೀಕೃಷ್ಣನಂತೂ ಹೇಗೆ ಬರುತ್ತಾರೆ? ಆದರೆ ಕೃಷ್ಣನ ಆತ್ಮವಂತೂ ಇಲ್ಲಿಯೇ ಇದೆ.

ಈಗ ನಿಮ್ಮ ಬುದ್ಧಿಯ ಬೀಗವು ತೆರೆದಿದೆ. ನಿಮಗೆ ಗೊತ್ತಿದೆ, ನಾವು ತಂದೆಯಿಂದ ವಿಶ್ವದ ಮಾಲೀಕರಾಗುತ್ತೇವೆ. ಆಸ್ತಿಯನ್ನು ಪಡೆಯುತ್ತೇವೆ. ನೀವೇ ಮಮ್ಮಾ-ಬಾಬಾ ಎಂದು ಹೇಳುತ್ತೀರಿ ಅಂದಮೇಲೆ ನೀವು ವಿದ್ಯೆಯಲ್ಲಿ ಅನುಕರಣೆ ಮಾಡಬೇಕಾಗಿದೆ ಆದ್ದರಿಂದ ಫಾಲೋ ಫಾದರ್ ಎಂದು ಗಾಯನ ಮಾಡಲಾಗುತ್ತದೆ. ಸತ್ಯತಂದೆಯೇ ಬೇಕಲ್ಲವೆ. ಆರ್ಟಿಫಿಶಿಯಲ್ ಅಂತೂ ಇಲ್ಲ ಅಲ್ಲವೆ? ಗಾಂಧಿಯನ್ನು ಬಾಪೂಜಿ ಎಂದು ಹೇಳುತ್ತಿದ್ದರು ಆದರೆ ಆಸ್ತಿಯಂತೂ ಏನೂ ಸಿಗಲಿಲ್ಲ. ಅದು ಹದ್ದಿನ ಬಾಪೂಜಿಯಿಂದ ಅಲ್ಪಕಾಲದ ಆಸ್ತಿಯಾಯಿತು. ಅವರನ್ನು ಬೇಹದ್ದಿನ ಬಾಪೂಜಿ ಎಂದು ಹೇಳುವುದಿಲ್ಲ. ಈ ಬೇಹದ್ದಿನ ಬಾಪೂಜಿಯಂತೂ ಪರಮಧಾಮದಿಂದ ಬಂದಿದ್ದಾರೆ. ನಿಮ್ಮನ್ನು ಸ್ವರ್ಗದ ಮಾಲೀಕರನ್ನಾಗಿ ಮಾಡುತ್ತಾರೆ. ನೀವೀಗ ತ್ರಿಕಾಲದರ್ಶಿಯಾಗಿದ್ದೀರಿ, ನೀವೇ ವೈಕುಂಠದ ಮಾಲೀಕರಾಗುತ್ತೀರಿ ಅಂದಮೇಲೆ ಬೇಹದ್ದಿನ ತಂದೆಯಲ್ಲಿ ಎಷ್ಟೊಂದು ಪ್ರೀತಿಯಿರಬೇಕು! ಅನ್ಯಸಂಗವನ್ನು ಬಿಟ್ಟು ನಿಮ್ಮೊಬ್ಬರ ಸಂಗವನ್ನೇ ಸೇರುತ್ತೇನೆ. ಈ ನಿಮ್ಮ ಪ್ರತಿಜ್ಞೆಯು ತಂದೆಯ ಜೊತೆಯಿದೆ. ತಂದೆಯು ಕುಳಿತು ಮಕ್ಕಳಿಗೆ ಎಷ್ಟು ಪ್ರೀತಿಯಿಂದ ತಿಳಿಸುತ್ತಾರೆ. ಶಿವತಂದೆಯು ಯಾವಾಗ ಬಂದರು? ರಕ್ಷಾಬಂಧನವು ಯಾವಾಗ ಆಯಿತು? ದೈವೀಗುಣ ಧಾರಣೆ ಹೇಗೆ ಮಾಡಿದಿರಿ? ಇದು ನಿಮ್ಮ ವಿನಃ ಮತ್ಯಾರಿಗೆ ಗೊತ್ತಿದೆ! ಗೀತಾಶಾಸ್ತ್ರಗಳನ್ನು ಓದುತ್ತಾರೆ ಮತ್ತು ಕೇಳುತ್ತಾರೆ ಆದರೆ ಏನನ್ನೂ ಅರಿತುಕೊಂಡಿಲ್ಲ. ನಿಮ್ಮದು ಸಾರ ರೂಪದ ಜ್ಞಾನವಾಗಿದೆ. ಇದರಲ್ಲಿ ಶಾಸ್ತ್ರ ಇತ್ಯಾದಿಗಳ ಮಾತಿಲ್ಲ. ಭಗವಂತನು ಕುಳಿತು ತಿಳಿಸುತ್ತಾರೆ ಅಂದಾಗ ಸಂಗಮದಲ್ಲಿಯೇ ಕಲಿಸಿದ್ದರು. ಈಗ ನೀವು ಸಮ್ಮುಖದಲ್ಲಿ ಕೇಳುತ್ತೀರೆಂದರೆ ನಶೆಯೇರುತ್ತದೆ ಮತ್ತೆ ಆ ನಶೆಯು ಕಡಿಮೆಯಾಗಬಾರದು. ಇದನ್ನು ಯಾವುದೇ ಮನುಷ್ಯರು ಓದಿಸುವುದಿಲ್ಲ. ಪರಮಪಿತ ಪರಮಾತ್ಮ ಯಾರು ಜ್ಞಾನಸಾಗರನಾಗಿದ್ದಾರೆ ಅವರು ಓದಿಸುತ್ತಿದ್ದಾರೆ. ಬ್ರಹ್ಮಾಕುಮಾರ-ಕುಮಾರಿಯರೆಲ್ಲರೂ ಕೇಳುತ್ತಿದ್ದೀರಿ. ಕೇಳಿ ಮತ್ತೆ ಅನ್ಯರಿಗೆ ತಿಳಿಸುತ್ತೀರಿ. ನಿಮ್ಮ ಅಗ್ರಿಮೆಂಟ್ ಆಗಿದೆ- ತಂದೆಯಿಂದ ಏನನ್ನು ಕೇಳುತ್ತೇವೆಯೋ ಅದನ್ನು ಅನ್ಯರಿಗೆ ಅವಶ್ಯವಾಗಿ ತಿಳಿಸುತ್ತೇವೆ. ಇಲ್ಲವೆಂದರೆ ಕೇಳುವುದಾದರೂ ಏತಕ್ಕೆ! ಈಗ ನೀವು ಬೇಹದ್ದಿನ ತಂದೆಯ ಮಕ್ಕಳಾಗಿದ್ದೀರಿ. ತಂದೆಯು ತಿಳಿಸುತ್ತಾರೆ- ನನ್ನೊಬ್ಬನನ್ನೇ ನೆನಪು ಮಾಡಿ, ದೇಹಸಹಿತ ದೇಹದ ಎಲ್ಲಾ ಸಂಬಂಧಗಳನ್ನು ಬಿಟ್ಟುಬಿಡಿ. ತಂದೆಯು ಶಿವನಾಗಿದ್ದಾರೆ, ನೀವು ಸಾಲಿಗ್ರಾಮಗಳಾಗಿದ್ದೀರಿ. ತಂದೆ ಮತ್ತು ಮಕ್ಕಳು. ತಂದೆಯು ತಿಳಿಸುತ್ತಾರೆ- ನಾನೂ ನಿರಾಕಾರಿ, ನೀವೂ ನಿರಾಕಾರಿಯಾಗಿದ್ದಿರಿ. ನಂತರ ಇಲ್ಲಿ ಪಾತ್ರವನ್ನಭಿನಯಿಸಲು ಬಂದಿದ್ದೀರಿ. ಈಗ ಹಿಂತಿರುಗಿ ಪುನಃ ಹೋಗಬೇಕಾಗಿದೆ. ತಂದೆಯು ಬ್ರಹ್ಮಾಂಡದ ಮಾಲೀಕನಾಗಿದ್ದಾರೆ. ನೀವೂ ಸಹ ಬ್ರಹ್ಮಾಂಡದ ಮಾಲೀಕರಾಗಿದ್ದಿರಿ ಅದನ್ನು ಪರಮಧಾಮ, ನಿರ್ವಾಣಧಾಮ, ಮೂಲವತನ

ಇತ್ಯಾದಿ ಎಂದು ಹೇಳುತ್ತಾರೆ. ಇವೆಲ್ಲವೂ ಹೆಸರುಗಳಾಗಿವೆ- ಮೂಲವತನ, ಸೂಕ್ಷ್ಮವತನ, ಸ್ಥೂಲವತನ- ಈ ಚಕ್ರವು ಸಮ್ಮುಖದಲ್ಲಿ ಸುತ್ತುತ್ತಿರುತ್ತದೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ವಿದ್ಯೆಯಲ್ಲಿ ತಂದೆ-ತಾಯಿಯನ್ನು ಫಾಲೋ ಮಾಡಬೇಕು. ಶ್ರೇಷ್ಠಾತಿಶ್ರೇಷ್ಠ ಧಾಮದಿಂದ ಭಗವಂತ ನಮಗೆ ಓದಿಸಲು ಬಂದಿದ್ದಾರೆ ಎಂದು ಖುಷಿಯಲ್ಲಿ ಇರಬೇಕು.

2. ಈಗ ನಾವು ನಮ್ಮ ಮಧುರ ಮನೆಗೆ ಹೋಗಬೇಕು, ಆದ್ದರಿಂದ ಅಶರೀರಿ ಆಗುವ ಅಭ್ಯಾಸ ಮಾಡಬೇಕು. ದೇಹ ಸಹಿತ ಎಲ್ಲವನ್ನು ಮರೆಯಬೇಕು.

ವರದಾನ: ಶಬ್ಧದಿಂದ ದೂರ ಶ್ರೇಷ್ಠ ಸ್ಥಿತಿಯಲ್ಲಿ ಸ್ಥಿತರಾಗಿ ಶಾಂತಿಯ ಶಕ್ತಿಯ ಅನುಭವ ಮಾಡುವಂತಹ ಮಾಸ್ಟರ್ ಬೀಜರೂಪ ಭವ

ಶಬ್ಧದಿಂದ ದೂರ ಇರುವಂತಹ ಶ್ರೇಷ್ಠ ಸ್ಥಿತಿ ಸರ್ವ ವ್ಯಕ್ತ ಆಕರ್ಷಣೆಗಳಿಂದ ದೂರ ನ್ಯಾರೆ ಮತ್ತು ಪ್ಯಾರೆ ಶಕ್ತಿಶಾಲಿ ಸ್ಥಿತಿಯಾಗಿದೆ. ಒಂದು ಸೆಕೆಂಡ್ ಆದರೂ ಈ ಸ್ಥಿತಿಯಲ್ಲಿ ಸ್ಥಿತರಾಗಿದ್ದೇ ಆದರೆ ಅದರ ಪ್ರಭಾವ ಇಡೀ ದಿನ ಕರ್ಮ ಮಾಡುತ್ತಿದ್ದರೂ ಸಹ ಸ್ವಯಂ ನಲ್ಲಿ ಶಾಂತಿಯ ಶಕ್ತಿಯ ಅನುಭವ ಮಾಡುವಿರಿ. ಈ ಸ್ಥಿತಿಯನ್ನೆ ಕರ್ಮಾತೀತ ಸ್ಥಿತಿ, ತಂದೆ ಸಮಾನ ಸಂಪೂರ್ಣ ಸ್ಥಿತಿ ಎಂದು ಹೇಳಲಾಗುವುದು. ಇದೇ ಮಾಸ್ಟರ್ ಬೀಜರೂಪ, ಮಾಸ್ಟರ್ ಸರ್ವ ಶಕ್ತಿವಾನ್ ಸ್ಥಿತಿಯಾಗಿದೆ, ಈ ಸ್ಥಿತಿಯ ಮುಖಾಂತರ ಪ್ರತಿ ಕಾರ್ಯದಲ್ಲಿ ಸಫಲತೆಯ ಅನುಭವವಾಗುವುದು.

ಸ್ಲೋಗನ್: ಮಹಾನ್ ಆತ್ಮ ಇವರೇ ಆಗಿದ್ದಾರೆ ಯಾರ ಪ್ರತಿ ಮಾತು ಮಹಾವಾಕ್ಯವಾಗಿರುವುದು.